(7) ಬೆಳಗಾವಿ ಜಿಲ್ಲೆಯಲ್ಲಿರುವ ಮಲ ಪ್ರಭಾ ಮತ್ತು ಘಟಪ್ರಭಾ ವ್ಯಾಪ್ತಿಗೆ ಬರುವ ಕೆಲವು ಸಬ್ ಡಿವಿಜನ್‌ಗಳನ್ನು ರದ್ದುಗೊಳಿಸಲು ಉದ್ದೇಶಿಸಿರುವುದರ ಬಗ್ಗೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಸಂಕೇಶ್ವರ) : ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ ಇರುವ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳ ವ್ಯಾಪ್ತಿಗೆ ಬರುವ ಕೆಲವೊಂದು ಉಪ ವಿಭಾಗ (ಸಬ್‌ಡಿವಿಜನ್) ಹಾಗೂ ವಿಭಾಗ (ಡಿವಿಜನ್)ಗಳನ್ನು ರದ್ದುಗೊಳಿಸುವ ಪ್ರಸ್ತಾವವನ್ನು ಸರ್ಕಾರಕ್ಕೆ ಕಳಿಸಿಕೊಡಲಾಗಿದೆ ಎಂದು ತಿಳಿದು ಬಂದಿದೆ. ಇದರಿಂದ ನೀರಾವರಿ ಪ್ರದೇಶದಲ್ಲಿರುವ ರೈತವರ್ಗಕ್ಕೆ ಹಾಗೂ ಸಾರ್ವಜನಿಕರಿಗೆ ಹೇಳತೀರದಷ್ಟು ತೊಂದರೆಯಾಗುತ್ತಿದೆ. ಕೆಲಸದ ಒತ್ತಡಗಳನ್ನು ನೋಡಿ ಈ ಸಬ್ ಡಿವಿಜನ್‌ಗಳನ್ನು ಮುಂದುವರಿಸಬೇಕೆಂದು ಸಾರ್ವಜನಿಕರ ಅಭಿಪ್ರಾಯವಾಗಿರುತ್ತದೆ. ಇದರಲ್ಲಿ ಮುಖ್ಯವಾಗಿ ರಾಯಭಾಗ ಹಾಗೂ ಬೈಲಹೊಂಗಲದಲ್ಲಿರುವ ಇಲೆಕ್ಟ್ರಿಕಲ್ ಸಬ್ ಡಿವಿಜನ್‌ಗಳನ್ನು ಹಾಗೂ ನೀರಾವರಿ ಸಬ್ ಡಿವಿಜನ್‌ಗಳನ್ನು ಮುಚ್ಚುವ ಪ್ರಚಾರದ ಹಿನ್ನಲೆಯಲ್ಲಿ ಜನರು ಸರ್ಕಾರದ ಮೇಲೆ ಒತ್ತಾಯ ಬೀರುವಂತೆ ಹಾಗೂ ಸಬ್ ಡಿವಿಜನ್‌ಗಳನ್ನು ಮುಂದುವರಿಸುವಂತೆ ಪ್ರತ್ಯಕ್ಷವಾಗಿ ಹಾಗೂ ಮನವಿಗಳನ್ನು ಸಲ್ಲಿಸಿರುವ ಮೂಲಕ ವಿನಂತಿಸಿರುತ್ತಾರೆ. ಕಾರಣ ಈ ವಿಷಯವನ್ನು ಗಮನಿಸಿ ಹೇಳಿಕೆ ನೀಡುವಂತೆ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ನೀರಾವರಿ ಉತ್ತರ ವಲಯದ ವಿಭಾಗ ಹಾಗೂ ಉಪ ವಿಭಾಗಗಳ ಸಿಬ್ಬಂದಿ ಸ್ಥಿತಿ (ಸ್ಟಾಫಿಂಗ್ ಪೊಸಿಷನ್) ನ್ನು ಪುನರ್‌ಅವಲೋಕಿಸಿ, ಮುಖ್ಯ ಅಭಿಯಂತರರು ನೀರಾವರಿ—ಉತ್ತರ—ವಲಯದ—ಬೆಳಗಾವಿಯವರು ಕೆಲವು ವಿಭಾಗ ಹಾಗೂ ಉಪ ವಿಭಾಗಗಳನ್ನು ಮುಚ್ಚಲು ಹಾಗೂ ನಿಶ್ಚಿಯಗೊಳಿಸಲು ಪ್ರಸ್ತಾಪಿಸಿರುವುದು ಸರಿಯಷ್ಟೆ. ಈ ಪ್ರಸ್ತಾವನೆಯಲ್ಲಿ ರಾಯಭಾಗ್ ಹಾಗೂ ಬೈಲಹೊಂಗಲದಲ್ಲಿರುವ ಎಲೆಕ್ಟ್ರಿಕಲ್ ಸಬ್ ಡಿವಿಜನ್ ಹಾಗೂ ನೀರಾವರಿ ಸಬ್ ಡಿವಿಜನ್‌ಗಳನ್ನು ಮುಚ್ಚುವ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. ಮುಖ್ಯ ಅಭಿಯಂತರರ ಪ್ರಸ್ತಾವನೆಯು ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದ್ದು, ಈ ಬಗ್ಗೆ ಯಾವ ತೀರ್ಮಾನವನ್ನೂ ತೆಗೆದುಕೊಂಡಿರುವುದಿಲ್ಲ. ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ರೈತವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಆಗುವ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು.

(8) ಮೂಡಿಗೆರೆ ತಾಲ್ಲೂಕಿನ ಕಳಸ ಟೌನ್‌ಗೆ ಕುಡಿಯುವ ನೀರಿನ ಯೋಜನೆ.

ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೇ, ಮೂಡಿಗೆರೆ ತಾಲ್ಲೂಕಿನ ಕಳಸಾ ಟೌನಿಗೆ 1979ರಲ್ಲಿ ಕಳಸಾ ಕುಡಿಯುವ ನೀರಿನ ಯೋಜನೆ, ಸುಮಾರು 17 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಲಾಯಿತು. ಆದರೆ ಅಲ್ಲಿನ ಜನರ ದುರಾದೃಷ್ಟ ಅನ್ನಿಸುತ್ತದೆ. ಇಡೀ ಕಳಸಾ ಟೌನ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿದಿಲ್ಲ. ಇಲ್ಲಿ ಏನು ತೊಂದರೆಯಾಗಿದೆ ಎಂದು ಇಲಾಖೆಯ ಗಮನಕ್ಕೆ ತೆಗೆದುಕೊಂಡಿಲ್ಲ. ಜೊತೆಗೆ ಇದರ ಬಗ್ಗೆ ಪರಿಹಾರವನ್ನು ಹುಡುಕುವಲ್ಲಿ ಜನಾರೋಗ್ಯ ಇಲಾಖೆ (ಪಿಹೆಚ್‌ಇ) ವಿಫಲವಾಗಿದೆ. ಇನ್ನಾದರೂ ತತ್‌ಕ್ಷಣ ಕಳಸಾ ಕುಡಿಯುವ ನೀರಿನ ಯೋಜನೆಯಿಂದ ಕಳಸ ಟೌನಿಗೆ ಸರಿಯಾಗಿ ಕುಡಿಯುವ ನೀರನ್ನು ಒದಗಿಸಲು ಆಗಬೇಕಾದ ಕೆಲಸವನ್ನು ಬೇಕಾದಷ್ಟು ಹಣ ಒದಗಿಸಿ 80 ಹೆಚ್‌ಪಿ ಮೋಟಾರ್

ಹಾಕಿ, ಸರಿಯಾಗಿ ಕಳಸಾ ಟೌನಿನ ಎಲ್ಲಾ ಜನರಿಗೂ ನೀರು ಒದಗಿಸಲು ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಶಾಸಕರು ಎತ್ತಿದ ಪ್ರಶ್ನೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್‌ರಾಜ್ ಮಂತ್ರಿಗಳಿಗೆ ಸಂಬಂಧಪಟ್ಟಿದ್ದಾಗಿದೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮವನ್ನು ಏರ್ಪಾಡು ಮಾಡಲಾಗುವುದು.

2.05 ಪಿ.ಎಂ.

(9) ಕೋಮು ಗಲಬೆಯಲ್ಲಿ ಹಾನಿಗೊಳಗಾದವರಿಗೆ ಪರಿಹಾರ ಕೊಡುವುದು

SRI SADAT ALI KHAN (CHANNAPATNA) : The Chief Minister during his visit to Ramanagaram, Channapatna, Channarayapatna, Davangere and other places, immeditaly after assuming the office to have on the spot inspection of the destruction took place in the communal clashes in all these places, stated that the Government jobs will be provided to the next kith and kin of those who have lost their lives during the communal clashes. Inspite of the assurance given by the Chief Moinister in reply to my Starred Question No.1000, it is stated that there is no proposal to provide appointments to the Members of the family losing their lives in the communal clashes. I request the Chief Minister to implement the assurances given by him immediately.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ಕೊಡಲಿಕ್ಕೆ ಇಚ್ಛಪಡುತ್ತೇನೆ. ಪ್ರಶ್ನೆ ಸಂಖ್ಯೆ 1000ಕ್ಕೆ ಒದಗಿಸಿರುವ ಉತ್ತರ ಪ್ರಸ್ತುತದಲ್ಲಿ ಜಾರಿಯಲ್ಲಿರುವ ನಿಯಮಗಳ ಮತ್ತು ಸೂಚನೆಗಳ ಆಧಾರದ ಮೇಲಿರುತ್ತದೆ. ಕೋಮು ಗಲಭೆಗಳಲ್ಲಿ ಮೃತ ಪಟ್ಟ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ಯಾವ್ಯಾವ ರೀತಿ ನೌಕರಿಯನ್ನು ಒದಗಿಸಲು ಸಾಧ್ಯ ಎನ್ನುವ ಪ್ರಶ್ನೆಯನ್ನು ಈ ರೀತಿಯ ಪ್ರಕರಣಗಳಲ್ಲಿ ಆದ್ಯತೆ ನೀಡುವ ಬಗ್ಗೆ ಸಂವಿಧಾನದ ಅನುಚ್ಛೇದ 14 ಮತ್ತು 16ರ ನಿರ್ಬಂಧನಾತ್ಮಕ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಲಾಗುವುದು.

ಉಪಾಧ್ಯಕ್ಷರು : ಈಗ ಸಭೆ ಎದ್ದು ಮತ್ತೆ 3-05ಕ್ಕೆ ಸಮಾವೇಶಗೊಳ್ಳುವುದು. ಸದನವು 2-06 ಗಂಟೆಗೆ ಮೇಲೆದ್ದು ಮತ್ತೆ 3-05ಕ್ಕೆ ಸೇರುವುದೆಂದು ನಿಶ್ಚಯಿಸಿತು.

ಸದನವು 3-15 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷಿಣಿ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾನು ಸಂಪೂರ್ಣವಾದ ವಿರೋಧವನ್ನು ಸೂಚಿಸಿ ಕೆಲವು ವಿಚಾರಗಳನ್ನು ಇಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಈ ಸರ್ಕಾರ ಬಂದನಂತರ ಇದರ ಹಿಂದೆ ಇದ್ದ ಜನತಾದಳದ ಸರ್ಕಾರದವರು ತಂದಿದ್ದಂತಹ ಯೋಜನೆಗಳನ್ನು ಕೈಬಿಟ್ಟಿದ್ದಾರೆ. ಅದು ರೈತರ ಪರವಾದ ಯೋಜನೆಗಳಿರಬಹುದು ಅಥವಾ ಕಡುಬಡವರ ಪರವಾದ ಯೋಜನೆಗಳು ಅಥವಾ ವಿದ್ಯಾರ್ಥಿಗಳ ಪರವಾದ ಯೋಜನೆಗಳಾಗಿರಬಹುದು.